**<u>ದಿನಾಂಕಃ 26.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಎಲ್.ಎ ವಕೀಲರಿಂದಃ-</u>

1) ದಾವಾ ಸರ್ವೆ ನಂಬರ್ ಆಸ್ತಿಯು ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ವಾದಿಯ ತಂದೆ ಕುನ್ನಿ ವೆಂಕಟೇಗೌಡರವರ ಹೆಸರಿಗೆ ಇದೆ ಎನ್ನುತ್ತಾರೆ. ಸದರಿ ದಾವಾ ಆಸ್ತಿಯು ಕುನ್ನಿ ವೆಂಕಟೇಗೌಡರವರ ಹೆಸರಿಗೆ ಖಾತೆ ಇರುವ ಬಗ್ಗೆ ದಾಖಲೆ ನೋಡಿದ್ದೀರಾ ಎಂದರೆ ಸಾಕ್ಷಿ ನಾನೇಕೆ ನೋಡಲಿ ಎನ್ನುತ್ತಾರೆ. ದಾವಾ ಆಸ್ತಿಯ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಎಷ್ಟು ಎಂದು ಕೇಳಲಾಗಿ ಸರ್ವೆ ನಂ482/2 ವಿಸ್ತೀರ್ಣ 1 ಎಕರೆ 15 ಗುಂಟೆ ಎನ್ನುತ್ತಾರೆ. ದಾವಾ ಆಸ್ತಿಯು ನಂಜಮ್ಮ ಕೋಂ ಲೇ.ವೆಂಕಟೇಗೌಡ, ದೇವಮ್ಮ ಕೋಂ ಲೇ. ಕುನ್ನಿ ವೆಂಕಟೇಗೌಡರವರ ಹೆಸರಿಗೆ ಜಂಟಿ ಖಾತೆ ಇದೆ ಎಂದರೆ ಸರಿ. ವೆಂಕಟೇಗೌಡ ಮತ್ತು ಕುನ್ನಿ ವೆಂಕಟೇಗೌಡ ಅಣ್ಣ ತಮ್ಮಂದಿರು ಎಂದರೆ ಸರಿ. ಸದರಿ ಇಬ್ಬರು ಸಹೋದರರು ಮರಣ ಹೊಂದಿದ ನಂತರ ದಾವಾ ಆಸ್ತಿಯು ಅವರಿಬ್ಬರ ಹೆಂಡತಿಯರ ಹೆಸರಿಗೆ ಪೌತಿ ಮೇರೆಗೆ ಜಂಟಿ ಖಾತೆ ಆಗಿದೆ ಎಂದರೆ ಸರಿ. ವೆಂಕಟೇಗೌಡ ಮತ್ತು ಕುನ್ನಿ ವೆಂಕಟೇಗೌಡ ರವರ ನಡುವೆ ದಾವಾ ಆಸ್ತಿಯು ವಿಭಾಗ ಆಗಿರಲಿಲ್ಲ ಹಾಗಾಗಿ ಅವರು ಸತ್ತ ನಂತರ ಅವರ ಹೆಂಡತಿಯರ ಹೆಸರಿಗೆ ಜಂಟಿ ಖಾತೆ ಬರುತ್ತಿದೆ ಎಂದರೆ ಸಾಕ್ಷಿಯು ವಿಭಾಗ ಆಗಿತ್ತು ಆದರೆ ಜಂಟಿ ಖಾತೆ ಬರುತ್ತಿದೆ ಎನ್ನುತ್ತಾರೆ.

2) 1 ಎಕರೆ 15 ಗುಂಟೆ ಪೈಕಿ 25 ಗುಂಟೆ ವಾದಿಯ ಭಾಗಕ್ಕೆ ಬಂದಿತ್ತು ಎಂದು ಹೇಳಿದ್ದು 25 ಗುಂಟೆಗೆ ಪ್ರತ್ಯೇಕವಾಗಿ ವಾದಿಯ ಹೆಸರಿಗೆ ಖಾತೆ ಆಗಿದೆಯಾ ಎಂದರೆ ಇಲ್ಲ ಎನ್ನುತ್ತಾರೆ. ತಾವು ನ್ಯಾಯಾಲಯಕ್ಕೆ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳ ಸಂಬಂಧ ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ವಾದಿಗೆ ಸಹಾಯ ಮಾಡಲು ನಾನು ಅವರ ಪರ ಸುಳ್ಳು ಸಾಕ್ಷ್ಯ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ